**ಸಿ.ಸಿ. ಸಂ. 3850/2022 PW-1**

**<u>ದಿನಾಂಕಃ 10.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಆರೋಪಿ ಪರ ಶ್ರೀ. ಸಿ.ಆರ್.ಎನ್. ವಕೀಲರಿಂದಃ-</u>

1) ಆರೋಪಿತರು ನನಗೆ ಸುಮಾರು 7 ವರ್ಷಗಳಿಂದ ಪರಿಚಯ. 2 ನೇ ಆರೋಪಿ ಎಲ್.ಐ.ಸಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು ಹಾಗಾಗಿ ಅವರ ಪರಿಚಯ ಆಯಿತು. ನಾನು ವ್ಯವಸಾಯ ಮಾಡುತ್ತೇನೆ. ಆರೋಪಿತರು ಮನೆ ಖರೀದಿಗಾಗಿ ನನ್ನಿಂದ ಸಾಲ ಪಡೆದುಕೊಂಡರು. ಸದರಿ ಮನೆ ಮೇಲೆ ಲೋನ್ ಪಡೆದು ಸಾಲ ತೀರಿಸುವುದಾಗಿ ನನಗೆ ತಿಳಿಸಿದ್ದರು. ಆರೋಪಿತರು ಎಷ್ಟು ಲಕ್ಷಕ್ಕೆ ಮನೆ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಜೂನ್ 2020 ರಲ್ಲಿ ನನ್ನ ಬಳಿ ಬಂದು ಸಾಲ ಕೇಳಿದರು. ಅಂದೇ ನಾನು ಆರೋಪಿತರಿಗೆ ಸಾಲದ ಹಣ ನೀಡಿದ್ದೇನೆ. ಆರೋಪಿತರಿಗೆ ನಾನು ಹಣವನ್ನು ಸಾಲವಾಗಿ ನೀಡುವ ಸಮಯದಲ್ಲಿ ನನ್ನ ಸ್ನೇಹಿತನಾದ ಶಿವರಾಜು ರವರು ಹಾಜರಿದ್ದರು.

2) ಜೂನ್ 2020 ರಲ್ಲಿ ಕೋವಿಡ್ ಲಾಕ್ ಡೌನ್ ಇತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿರಲಿಲ್ಲ ಎಂದರೆ ಸರಿ. ನನಗೆ ಸೇರಿದ ಮೂರು ಮನೆಗಳ ಮೇಲೆ ನಾನು ಬ್ಯಾಂಕಿನಲ್ಲಿ ಸಾಲ ಪೆಡದು ಸದರಿ ಹಣದಲ್ಲಿ ನಾನು ಆರೋಪಿತರಿಗೆ ಸಾಲದ ಹಣ ನೀಡಿದ್ದೇನೆ. ನಾನು ಬ್ಯಾಂಕಿನಿಂದ ಸಾಲ ಪಡೆದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ. ಆರೋಪಿತರಿಗೆ ಸ್ವಂತ ಮನೆ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ